**ಸಿ.ಸಿ. ನಂಬರಃ 2049/2025**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 28–01–2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಟಿ.ಎನ್. ವಕೀಲರಿಂದ,**

7. ನಿಪಿ–2 ಚೆಕ್ಕನ್ನು ದಿನಾಂಕಃ 30–05–2025 ರಂದು ನೀಡಿದ್ದಾರೆಂದು ತೋರಿಸಲು ದಾಖಲೆ ಇರುತ್ತದೆ. ಚೆಕ್ಕು ನೀಡಿದ ಬಗ್ಗೆ ಫಿರ್ಯಾದಿ ಸೊಸೈಟಿಯ ಆವಕ ರಜಿಸ್ಟರ್ ನಲ್ಲಿ ನಮೂದು ಇರುತ್ತದೆ. ಸದ್ರಿ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಆರೋಪಿ ಸಾಲದ ಹಣ ಸ್ವೀಕರಿಸಿದ ಬಗ್ಗೆ ರಶೀದಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ.

8. ಆರೋಪಿ ದೂರಿನಲ್ಲಿ ಹೇಳಿದ ಸಾಲಕ್ಕಿಂತ ಪೂರ್ವದಲ್ಲಿ ಬೇರೆ ಸಾಲ ಫಿರ್ಯಾದಿ ಸೊಸೈಟಿಯಲ್ಲಿ ಪಡೆದುಕೊಂಡಿದ್ದರು. ಅದು ವಾಹನ ಸಾಲವಾಗಿತ್ತು. ಸದ್ರಿ ಸಾಲವನ್ನು ಆರೋಪಿ ಸಂಪೂರ್ಣವಾಗಿ ಮರುಪಾವತಿಸಿರುತ್ತಾರೆ. ಹಾಗಾಗಿ ಆರೋಪಿಯು ಫಿರ್ಯಾದಿ ಸೊಸೈಟಿಯ ಒಳ್ಳೆಯ ಗ್ರಾಹಕ ಎಂದರೆ, ಸಾಕ್ಷಿಯು ಮೊದಲು ಒಳ್ಳೆಯ ಗ್ರಾಹಕರಾಗಿದ್ದರು, ಆದರೆ ಈಗ ಆಗಿರುವುದಿಲ್ಲ. ಹಿಂದಿನ ಸಾಲದ ದಾಖಲಾತಿಗಳನ್ನು ಆರೋಪಿಗೆ ವಾಪಸ್ಸು ನೀಡಿರುತ್ತೇವೆ. ದೂರಿನಲ್ಲಿ ಹೇಳಿದ ಸಾಲಕ್ಕೆ ಸಂಬಂಧಿಸಿದಂತೆ, ಸಾಲದ ಲೆಡ್ಜರ್ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ.

9. ನಿಪಿ–4 ನೋಟೀಸು ಆರೋಪಿ ಸ್ವೀಕರಿಸದೇ ವಾಪಸ್ಸು ಬಂದಿರುತ್ತದೆ. ದೂರಿನಲ್ಲಿ ಹೇಳಿದ ಸಾಲವನ್ನು ಆರೋಪಿಯು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–2 ಸಹಿ ಮಾಡಿದ ಖಾಲಿ ಚೆಕ್ಕನ್ನು ಆರೋಪಿಯ ಹಿಂದಿನ ವಾಹನ ಸಾಲದ ದಾಖಲೆಯಾಗಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ವಾಹನ ಸಾಲವನ್ನು ಮರುಪಾವತಿಸಿದ ನಂತರ ಸದ್ರಿ ಸಾಲಕ್ಕೆ ದಾಖಲಾತಿಯಾಗಿ ನೀಡಿದ ನಿಪಿ–2 ಚೆಕ್ಕು, ಆಧಾರ್ ಕಾರ್ಡ, ರೇಷನ್ ಕಾರ್ಡ, ಚುನಾವಣಾ ಗುರುತಿನ ಚೀಟಿಯನ್ನು ಆರೋಪಿಯು ವಾಪಸ್ಸು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸದ್ರಿ ಸಾಲದ ಷೇರು ಮೊತ್ತ ಮತ್ತು ನಿಶ್ಚಿತ ಠೇವಣಿಯನ್ನು ವಾಪಸ್ಸು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆಗಿನ ವ್ಯವಸ್ಥಾಪಕರು ಸದ್ರಿ ದಾಖಲಾತಿಗಳನ್ನು ಮತ್ತು ಸಾಲದ ಷೇರು ಮೊತ್ತ ಮತ್ತು ನಿಶ್ಚಿತ ಠೇವಣಿಯ ಮೊತ್ತವನ್ನು ವಾಪಸ್ಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆಗ ಆ ಬಗ್ಗೆ ಆರೋಪಿಯು ಫಿರ್ಯಾದಿ ಸೊಸೈಟಿಯ ಮುಖ್ಯ ಕಛೇರಿ, ಕಾರವಾರಕ್ಕೆ ಸದ್ರಿ ವ್ಯವಸ್ಥಾಪಕರ ವಿರುದ್ಧ ದೂರು ನೀಡಿದ್ದರು ಎಂದರೆ ಸರಿಯಲ್ಲ. ತದನಂತರ, ಆರೋಪಿಯು ವಿಜಯಾ ಬ್ಯಾಂಕ್ ಗೆ ಪತ್ರ ಬರೆದು, ಖಾತೆಯನ್ನು ಬ್ಲಾಕ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಿಂದಿನ ವ್ಯವಸ್ಥಾಪಕರು ಆರೋಪಿಯ ಮೇಲಿನ ಸಿಟ್ಟಿನಿಂದ ಆರೋಪಿಯ ಹಿಂದಿನ ವಾಹನ ಸಾಲದ ದಾಖಲಾತಿಗಳಾದ ಚೆಕ್ಕು ಮತ್ತು ಇತರ ದಾಖಲಾತಿಗಳನ್ನು ಉಪಯೋಗಿಸಿ ಈ ಸುಳ್ಳು ಪ್ರಕರಣವನ್ನು ನನ್ನ ಮೂಲಕ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

10. ನಿಪಿ-2 ಚೆಕ್ಕಿನಲ್ಲಿ ಹಿಂದಿನ ವ್ಯವಸ್ಥಾಪಕರೇ ಬರವಣಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-7 ರಿಂದ 9 ದಾಖಲಾತಿಗಳನ್ನು ಈ ಕೇಸಿಗಾಗಿ ನಾವು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-7 ಸಾಲದ ಅರ್ಜಿಯನ್ನು ಆರೋಪಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಿಪಿ-4 ನೋಟೀಸು ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ದೂರು ದಾಖಲಿಸಲು ಫಿರ್ಯಾದಿ ಸೊಸೈಟಿಯ ಮುಖ್ಯ ಕಛೇರಿಯಿಂದ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸು ದಾಖಲಿಸಿರುವ ಬಗ್ಗೆ ಫಿರ್ಯಾದಿ ಸೊಸೈಟಿಯ ಮುಖ್ಯ ಕಛೇರಿಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಫಿರ್ಯಾದಿ ಸೊಸೈಟಿಯೇ ಆತನ ಹಿಂದಿನ ಸಾಲದ ಷೇರು ಮೊತ್ತ ಮತ್ತು ನಿಶ್ಚಿತ ಠೇವಣಿ ಮೊತ್ತವನ್ನು ಪಾವತಿಸಲು ಬಾಕಿ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲಿಸಿ, ಆತನಿಗೆ ಅನ್ಯಾಯ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**